G R S App F IX 4]

Previous References

194 - (ML).

File No 177-41

Serial Nos 11

Later References

GENERAL AND REVENUE SECRETARIAT

Serial Nos

Part B for August 42

SUBJECT

Presentation of an address to H H by the Siddaghatta Municipal council and on 12 7 42 reply thereto — 1942-43

Ml 177-41-11

Bangalore,

26th June 1942

1756

Dear Sir,

Referring to the address proposed to be presented to His Highness the Maharaja by the Municipal Council of Sidlaghattacon the 12th July, I am desired to suggest as follows:-

1. The preamble may be simplied to read: "

2 On page 4, last paragraph, line 1-2, the words "

may be omitted

Yours sincerely,

(sd) C Narasimha Moorty

CHIEF SECRETARY
26 JUN 1942
GOVT OF MYSORE

T Ramaiya, Esq ,
Deputy Commissioner,
Kolar District,
KOLAR.

1757

Copy submitted to the Chief Secretary

C. Narasimha Murty

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರಾದ

ಶ್ರೀ ಜಯ ಚಾಮರಾಜೇಂದ್ರ ಒಡೆಯರ್ ಬಹದ್ದೂರ್

ಮಹಾಸ್ವಾಮಿಗಳವರ ದಿವ್ಯ ಸನ್ನಿಧಾನಂಗಳಲ್ಲಿ

ಶಿಡ್ಲಘಟ್ಟ ಪೌರಸಭೆಯ ಸದಸ್ಯರು ಅತ್ಯಂತ ರಾಜಭಕ್ತಿಪುರಸ್ಸರವಾಗಿ ಸಮರ್ಪಿಸಿದ ಬಿನ್ನವತ್ತಳೆ

ಮಹಾಸ್ವಾಮಿ,

ಶ್ರೀಮತ್ಕರ್ಣಾಟಕ ರತ್ನಸಿಂಹಾಸನಾಧೀಶ್ವರರಾಗಿಯೂ, ಮಾದರಿಯ ನಾಡೆಂದು ಕೀರ್ತಿಪಡೆದಿರುವ ಮಹೀಶೂರ ಸಂಸ್ಥಾನದ ಮಹಾಪ್ರಭುಗಳಾಗಿಯೂ ಇರುತ್ತಾ ಸಹಜವೂ ಅನ್ವರ್ಥವೂ ಆದ ಜಯ ನಾಮಾಂಕಿತದಿಂದ ವಿರಾಜಿಸುತ್ತಿರುವ ಮಹಾಪ್ರಭುಗಳವರು ಈ ಶಿಡ್ಲಘಟ್ಟ ತಾಲ್ಲೂಕಿಗೆ ಬಿಜಯಂಗೊಳಿಸಿ ಈ ಪ್ರಾಂತ್ಯದ ಜನಸಮುದಾಯಕ್ಕೆ ಮಹಾಪ್ರಭುಗಳವರ ದರ್ಶನಭಾಗ್ಯವಿತ್ತು ಮಹದಾನಂದವನ್ನುಂಟುಮಾಡಿರುವ ಈ ಸುಸಮಯದಲ್ಲಿಈ ಪುರದ ಮತ್ತು ತಾಲ್ಲೂಕಿನ ಪ್ರಜೆಗಳ ಪರವಾಗಿ ರಾಜಭಕ್ತಿಯುತರಾಗಿ ಮಹಾಸ್ವಾಮಿಯವರಿಗೆ ಸುಖಾಗಮನವನ್ನು ಬಯಸುವ ಸುಯೋಗವನ್ನು ಅನುಗ್ರಹಿಸಿರುವುದು ನಮ್ಮೆಲ್ಲರ ಭಾಗ್ಯವಿಶೇಷವೆಂದು ಬಿನ್ನೈಸಿಕೊಳ್ಳುತ್ತೇವೆ, ಮಹಾಸ್ವಾಮಿ

ಮಹಾಸ್ವಾಮಿಯವರು ಪೌರ್ವಾತ್ಯ, ಪಾಶ್ಚಿಮಾತ್ಯ, ದೇಶವಿದೇಶಗಳಲ್ಲಿ ಪ್ರವಾಸ ಕೈಗೊಂಡು ತಮಿತಾನುಭವವನ್ನು ಹೊಂದಿ, ಆಳಿದ ಮಹಾಸ್ವಾಮಿಯವರ ಛತ್ರಚ್ಛಾಯೆಯಲ್ಲಿ ಈ ವರೆವಿಗೆ ಪ್ರಜಾಸಮುದಾಯಕ್ಕೆ ಲಭಿಸಿರುವ ಮುನಿಸಿಪಾಲಿಟಿ, ಗ್ರಾಮ ಪಂಚಾಯಿತಿ, ಪರಸ್ಪರ ಸಹಾಯ ಸಂಘ ಮೊದಲಾದ ಸಂಸ್ಥೆಗಳಿಗಿರುವ ಸ್ವಾತಂತ್ರ್ಯ, ಸೌಭ್ಯತೆಗಳನ್ನು ಮತ್ತಷ್ಟು ವಿಸ್ತರಿಸಿ ಕಾರ್ಯಾಚರಣೆಗೆ ತಂದು ಇತೋಪ್ಯತಿಶಯವಾದ ಪ್ರಜಾನುರಾಗವನ್ನು ಪಡೆದಿರುವ ಮಹಾಪ್ರಭುಗಳ ಸನ್ನಿಧಿಯು ನಮಗೆ ಲಭಿಸಿರುವುದಕ್ಕೆ ನಾವು ಮಹದಾನಂದವನ್ನು ಪಡೆದವರಾಗಿರುತ್ತೇವೆ, ಮಹಾಸ್ವಾಮಿ

ಅಂತ ಸ್ಥಳೀಯ ಸಂಸ್ಥೆಗಳಲ್ಲೊಂದಾದ ಈ ಶಿಡ್ಲಘಟ್ಟ ಪೌರಸಭೆಯು ಇಂದಿನವರೆವಿಗೂ ಮಹಾಪ್ರಭುಗಳವರ ದಿವ್ಯಾನುಗ್ರಹ ಬಂದಿಂದ ತನ್ನ ಆಡಳಿತಕ್ಕೆ ಲೋಪವಿಲ್ಲದೆ ಈ ಪುರದ ಪ್ರಜೆಗಳ ವಿದ್ಯಾಭಿವೃದ್ಧಿ, ಆರೋಗ್ಯ, ಗ್ರಾಮನೈರ್ಮಲ್ಯ, ಜಲವಸತಿ, ಮಾರ್ಗ ಸೌಕರ್ಯ— ಇವೇ ಮೊದಲಾದ ಪ್ರಜೋಪಯುಕ್ತ ಕಾರ್ಯಗಳಲ್ಲಿ ಆಸಕ್ತಿಹೊಂದಿ ದಕ್ಷತೆಯಿಂದ ತನ್ನ ಕೆಲಸ ಕಾರ್ಯಗಳನ್ನು ನಡೆಸಿಕೊಂಡುಬರುತ್ತಿದೆ ಈ ಪುರದಲ್ಲಿ ಜನ, ಜಾನುವಾರುಗಳಿಗೆ ಉಪಯುಕ್ತವಾದ ಒಂದು ಲೋಕಲ್ ಫಂಡ್ ಆಸ್ಪತ್ರೆ, ಒಂದು ಆಯುರ್ವೇದ ವೈದ್ಯಶಾಲೆ, ಒಂದು ಪಶುವೈದ್ಯಶಾಲೆಯೂ, ಹಿಂದೂ ಮುಸ್ಲಿಂ ವಿದ್ಯಾರ್ದಿ ವಿದ್ಯಾರ್ದಿನಿಯರಿಗೆ ವಿದ್ಯಾಬಿವೃದ್ಧಿಗಾಗಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಉರ್ದುಶಾಲೆಗಳೂ, ಒಂದು ಕರ್ಣಾಟಕ ಸಂಘವೂ, ಒಂದು ವ್ಯಯಾಣಿಕರ ಬಂಗಲೆಯೂ, ಪುರಜನರ ವಿಹಾರಕ್ಕಾಗಿ ರೇಡಿಯೋ ಯಂತ್ರವನ್ನೊಳಗೊಂಡ ಒಂದು ಉದ್ಯಾನವನವೂ ಇರುತ್ತವೆ ಹಿಪ್ಪನೇರಿಳೆ ವ್ಯವಸಾಯವು ಈ ಗ್ರಾಮದಲ್ಲಿ ದಿನೇ ದಿನೇ ಅಭಿವೃದ್ಧಿಹೊಂದುತ್ತಿರುವಕಾರಣ ಪುನಸರ್ಕಾರದವರು ಈ ಗ್ರಾಮದಲ್ಲಿ ಒಂದು ಸರ್ಕಾರಿ "ರೇಷ್ಮೆವಾರಂ"ನ್ನು ಸ್ಥಾಪಿಸಿರುತ್ತಾರೆ ಮೈಸೂರು ಸಿಲ್ಕ್ ಫಿಲೇಚರ್ ಸಂಘದವರು ಈ ಊರಿನಲ್ಲಿ ಸುಮಾರು ೫೦,೦೦೦ ರೂಪಾಯಿಗಳ ವೆಚ್ಚದಾಜಿನಲ್ಲಿ ಒಂದು ನಯನಮನೋಹರವಾದ ಕಟ್ಟಡವನ್ನು ಕಟ್ಟಿಸಿ, ಶ್ರೇಷ್ಠವಾದ ರೇಷ್ಮೆಯನ್ನು ತಯಾರಿಸುತ್ತಾ ಈ ಗ್ರಾಮದ ನೂರಾರು ಜನರಿಗೆ ಜೀವನೋಪಾಯವನ್ನು ಕಲ್ಪಿಸಿ ತನ್ಮೂಲಕ ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಗೆ ನೆರವಾಗಿರುವ ಸಂಗತಿಯನ್ನು ಪುನಶ್ಚಿತ್ತಕ್ಕೆ ತರುತಾ ಸಂತೋಷಿಸುತ್ತೇವೆ ಮಹಾಸ್ವಾಮಿಯವರ ಪುನಸರ್ಕಾರವು ಈ ಊರಿಗೆ ವಿದ್ಯುಚ್ಛಕ್ತಿಯ ಸೌಕರ್ಯವನ್ನು ದಯವಾಲಿಸಿಕೊಟ್ಟು ತನ್ಮೂಲಕ ಪುರೋಭಿವೃದ್ಧಿಗೆ ಉತ್ತೇಜನವನ್ನು ಕೊಟ್ಟಿರುತ್ತೆ, ಮಹಾಸ್ವಾಮಿ

ಈ ಶಿಡ್ಲಘಟ್ಟವು ೭,೫೬೮ ಪ್ರಜಾ ಸಂಖ್ಯೆಯಿಂದ ಕೂಡಿ ೧,೪೯೬ ಮನೆಗಳನ್ನೊಳಗೊಂಡ ವಿಶಾಲವಾದ ಪುರವಾಗಿರುತ್ತೆ ಜನಾಬ ಎಣಿಕೆಯ ರೀತ್ಯ ಈ ಪುರವು ಕೋಲಾರ್ ಜಿಲ್ಲೆಯಲ್ಲಿ ಮೂರನೆಯದಾಗಿರುತ್ತೆ ಈ ಪೌರಸಭೆಯ ಆದಾಯವು ಸಾಲೀಯಾನ ೧೦,೦೦೦ ರೂಪಾಯಿಗಳಿದ್ದು, ಈ ಹುಟ್ಟುವಳಿಯು ಸಾಮಾನ್ಯ ವೆಚ್ಚಗಳಿಗೇನೇ ಪೂರ್ತಿಯಾಗಿ ವಿನಿಯೋಗವಾಗುತ್ತಾ, ಅತ್ಯವಶ್ಯಕವಾಗಿ ಆಗಬೇಕಾದ ಪುರೋಭಿವೃದ್ಧಿಕಾರ್ಯಗಳಿಗೆ ತವಕಾಶವಿಲ್ಲದಂತಾಗಿರುತ್ತೆ ಈ ಊರಿಗೆ ತತ್ಯವಶ್ಯಕವಾಗಿ ಆಗಬೇಕಾದವುಗಳಲ್ಲಿ ಮುಖ್ಯವಾದವುಗಳಾವುವೆಂದರೆ ೧ ಮುನಿಸಿಪಲ್ ಆಪೀಸ್ ಮತ್ತು ಪುರಭವನ, ೨ ಡ್ರೈನೇಜ್ ಸ್ಕೀಮ್, ಇವುಗಳಿಗೆ ಪುನಸರ್ಕಾರದವರ ಉದಾರ ದ್ರವ್ಯಸಹಾಯ ದೊರೆತ ಹೊರತು ಪೌರಸಭೆಯವರು ಈ ಕೆಲಸಗಳನ್ನು ಕೈಗೊಳ್ಳಲು ಶಕ್ತಿಯಿಲ್ಲದವರಾಗಿರುತ್ತಾರೆ, ಮಹಾಸ್ವಾಮಿ

ಮಹಾಸ್ವಾಮಿಯವರು ನಮ್ಮೂರಿಗೆ ಸವಾರಿ ಚಿತ್ತೈಸಿ ನಮ್ಮೆಲ್ಲರಿಗೂ ಮಹಾಪ್ರಭುಗಳ ದರ್ಶನಭಾಗ್ಯ ಕೊಟ್ಟದ್ದು ನಮ್ಮ ಭಾಗ್ಯೋದಯವೆಂದು ಬಿನ್ನೈಸುತ್ತೇವೆ, ಮಹಾಸ್ವಾಮಿ

ಮಹಾಸ್ವಾಮಿಯವರಿಗೂ, ವಿಶಿಷ್ಟ ರಾಜಕುಟುಂಬಕ್ಕೂ ಆ ದಯಾಮಯನಾದ ಭಗವಂತನು ಸಕಲ ಸನ್ಮಂಗಳಗಳನ್ನು ಅನವರತವೂ ದಯಪಾಲಿಸಲೆಂದು ಸತತವೂ ಪ್ರಾರ್ದಿಸುತ್ತೇವೆ, ಮಹಾಸ್ವಾಮಿ

ಶಿಡ್ಲಘಟ್ಟ,
೧೨ನೆಯ ಜುಲೈ ೧೯೪೨

ಮಹಾಸ್ವಾಮಿಯವರ ದಿವ್ಯಾನುಗ್ರಹಕ್ಕೆ ಪಾತ್ರರಾದ
ಶಿಡ್ಲಘಟ್ಟ ಪೌರಸಭೆಯ ಸದಸ್ಯರು

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರಾದ ಶ್ರೀ ಜಯ ಚಾಮರಾಜೇಂದ್ರ ಒಡೆಯರ್ ಬಹದ್ದೂರರವರು ಶಿಡ್ಲಘಟ್ಟದ ಪೌರಸಭೆಯವರಿಂದಲೂ, ಮೈಸೂರು ಸಂಸ್ಥಾನದ ರೇಷ್ಮೆ 'ಫಿಲೇಚರ್' ಕಂಪನಿಯವರ ಮತ್ತು ಮೈಸೂರು ಸಂಸ್ಥಾನದ ರೇಷ್ಮೆ ಸಂಘದವರ ಪರವಾಗಿಯೂ ಒಪ್ಪಿಸಲ್ಪಟ್ಟ ಬಿನ್ನವತ್ತಳೆಗಳಿಗೆ ಪ್ರತ್ಯುತ್ತರವಾಗಿ ದಯಪಾಲಿಸಿದ ಭಾಷಣ

೧೯೨೦ನೆಯ ಇಸವಿ ಜುಲೈ ೧೨ನೆಯ ತಾರೀಖು

ಶಿಡ್ಲಘಟ್ಟದ ಪೌರಸಭೆಯ ಸದಸ್ಯರೇ ವ ತ್ತು ವ ಹಾಶಯರೇ

ಸಂಸ್ಥಾನದಲ್ಲಿ ಸ್ಥಳೀಯ ಪ್ರಜಾಧಿಕಾರ ಸಂಸ್ಥೆಗಳು ಪ್ರಗತಿ ಹೊಂದಿರುವುದನ್ನು ಪೌರಸಭೆಯವರು ತಮ್ಮ ಬಿನ್ನವತ್ತಳೆಯಲ್ಲಿ ಸೂಚಿಸಿರುವುದು, ನಮ್ಮ ಮನಸ್ಸಿಗೆ ಮೆಚ್ಚಿಕೆಯನ್ನುಂಟು ಮಾಡಿದೆ ಆ ಪ್ರಗತಿಯ ಫಲಿತಾಂಶವಾಗಿ, ನಿಮ್ಮ ಊರಿನಲ್ಲೇ ಈಗ ಅನೇಕ ಸೌಕರ್ಯಗಳು ಕಲ್ಪಿತವಾಗಿವೆ ಮತ್ತು ಪೌರಸಭೆಯವರು ಕೆಲವು ಸೌಕರ್ಯಗಳನ್ನು ಇನ್ನೂ ಉತ್ತಮಗೊಳಿಸಿ ಹೊಸದಾಗಿ ಮತ್ತೆ ಕೆಲವನ್ನು ಏರ್ಪಡಿಸಬೇಕೆಂದಿದ್ದಾರೆ ಪ್ರಜಾನಿವಾಸಿಗಳ ಆರೋಗ್ಯವನ್ನೂ ಮತ್ತು ಯೋಗಕ್ಷೇಮವನ್ನೂ ಸಾಧಿಸುವ ಈ ಪ್ರಯತ್ನದಲ್ಲಿ ನಮ್ಮ ಸರ್ಕಾರದವರು ನಿಮಗೆ ಸಹಾನುಭೂತಿಯಿಂದ ಸಲಹೆ ಹೇಳಿ ಸಹಾಯ ಮಾಡುವರೆಂದು ನಾವು ಭರವಸೆ ಕೊಡುತ್ತೇವೆ

ರೇಷ್ಮೆ ಕಸಬು ನಡೆಯುವ ಮುಖ್ಯ ಸ್ಥಳಗಳಲ್ಲೊಂದಾದ ಈ ಊರಿನ ರೇಷ್ಮೆ ಫಿಲೇಚರ್ ಕಾರ್ಖಾನೆಯನ್ನು ಪರಿಶೀಲಿಸಿ, ರೇಷ್ಮೆ ಕೈಗಾರಿಕೆ ಪ್ರತಿನಿಧಿಗಳನ್ನು ಇಲ್ಲಿ ನೋಡುವುದು ನಮಗೆ ಸಂತೋಷಕರವಾಗಿದೆ ರೇಷ್ಮೆ ಕೈಗಾರಿಕೆಯಲ್ಲಿ ನಮಗೆ ಸರ್ವದಾ ಒಳ್ಳೆ ಆಸಕ್ತಿಯಿದ್ದೇ ಇದೆ ಏಕಂದರೆ, ನಮ್ಮ ಪ್ರಜೆಗಳಲ್ಲಿ ಅನೇಕ ಲಕ್ಷ ಮಂದಿಗಳಿಗೆ ಅದರಿಂದ ಕೆಲಸ ದೊರೆತು ಜೀವನವಾಗುತ್ತಿದೆ ಅಲ್ಲದೆ ರೇಷ್ಮೆ ವ್ಯವಸಾಯವನ್ನು ನಡೆಯಿಸಲು ಹೊರಗಿನ ಸಹಾಯವಾಗಲಿ, ಹೊರಗಿನ ಸಾಮಾನುಗಳಾಗಲಿ ಬೇಕಾಗಿಲ್ಲ ಅದನ್ನು ಯಾರು ಬೇಕಾದರೂ ಸ್ವಂತ

GRS III—3

ROUTINE NOTES

[To be used only for notes, requisitions, etc , not intended for permanent record]

[B —should routine notes be written on small slips he notes must be copied or slips pasted on this form

WD 078—GPB—30 000—25-7-40